**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

**ದಿಃ 17.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ವಿ ಕೆ ವಕೀಲರಿಂದಃ**

ನಿಡಿ 46 ರ ದಾಖಲಾತಿಯು ಅಸಲು ದಾವಾ ಸಂಖ್ಯೆ 108/2008 ರ ಆದೇಶದ ಪ್ರತಿಯ ದೃಢೀಕೃತ ನಕಲು ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ 108/2008 ರ ದಾವೆಯನ್ನು ಚನ್ನಪ್ಪ ನವರು 10.04.2008 ರಲ್ಲಿ ದಾಖಲು ಮಾಡಿದ್ದಾರೆ ಎಂದರೆ ಸರಿ. ನಿಡಿ 7 ರ ಪಂಚಾಯತಿ ಪಾರಿಕತ್ ಚನ್ನಪ್ಪ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಆದಂತಹ ದಾಖಲಾತಿ ಎಂದರೆ ಸರಿ. ನಿಡಿ 7 ರ ಪ್ರಕಾರ ಚನ್ನಪ್ಪನವರು ಪಂಚಾಯತಿ ಪಾರಿಕತ್ ನ್ನು ದಿಃ 14.12.2007 ರಂದು ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸರ್ವೆ ನಂ. 4 ಚಕ್ಕುಬಂದಿ ಅದಲು ಬದಲು ಆದ ಕಾರಣ ನಿಡಿ 7 ರ ಪ್ರಕಾರ ಪಂಚಾಯತಿ ಪಾರಿಕತ್ ನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಯಾವ ಉದ್ದೇಶಕ್ಕಾಗಿ ನಿಡಿ 7 ರ ಪಂಚಾಯತಿ ಪಾರಿಕತ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ವಾದಿ ಮತ್ತು 2 ನೇ ಪ್ರತಿವಾದಿ ಪರಿಹಾರ ಹಣವನ್ನು ಪಡೆದುಕೊಂಡಿರುವ ಕಾರಣ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ 7 ರ ಪಂಚಾಯತಿ ಪಾರಿಕತ್ ಪ್ರಕಾರ ದಾವಾ ಸ್ವತ್ತನ್ನು ಸಂಪಂಗಯ್ಯ, ಸಿಂಗರಪ್ಪ, ಚನ್ನಪ್ಪ, ಚನ್ನಪಿಳ್ಳಯ್ಯ, ಬೆಟ್ಟಯ್ಯ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ತಾವು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದೀರಿ ಎಂದು ತೋರಿಸಲು ನಿಡಿ 7 ರ ಪಂಚಾಯತಿ ಪಾರಿಕತ್ ನಲ್ಲಿ ಎಲ್ಲಿಯೂ ಒಕ್ಕಣೆ ಇಲ್ಲ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 7 ರ ಪಂಚಾಯತಿ ಪಾರಿಕತ್ ಆದ ನಂತರ ಚನ್ನಪ್ಪ ಮತ್ತು ಗಾಳಪ್ಪ ಮತ್ತು ತಮ್ಮ ತಾಯಿಯ ವಿರುದ್ಧ ನಿಡಿ 44 ರಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನಿಡಿ 44 ರ ದಾಖಲಾತಿಯ ಚಕ್ಕುಬಂದಿಯಲ್ಲಿ ತಮ್ಮ ತಾಯಿ ಅರಸಮ್ಮನವರಾಗಲಿ ತಮ್ಮ ತಂದೆ ಅಥವಾ ಗಾಳಪ್ಪರವರಾಗಲಿ ಭೂಮಿಯನ್ನು ಹೊಂದಿದ್ದಾರೆ ಎಂದು ಎಲ್ಲಿಯೂ ನಮೂದಾಗಿಲ್ಲ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಚನ್ನಪ್ಪನವರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ಹೂಡಿದ ನಂತರ ತಾವು ದಾವಾ ಸ್ವತ್ತಿಗೆ ಸಂಬಂಧಪಟಂತೆ ಕಂದಾಯ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಚನ್ನಪ್ಪನವರಿಗೆ ಸಂಬಂಧಪಟ್ಟಿದ್ದಲ್ಲ ಎಂದು ತಾವು ಮತ್ತು

**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

ಚನ್ನಪ್ಪನವರು ಮಾತಾಡಿಕೊಂಡು ಸದರಿ ದಾವೆಯನ್ನು ವಜಾ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕರ್ನಾಟಕ ಗೃಹ ಮಂಡಳಿಯವರು ಸ್ವಾಧೀನಪಡಿಕೊಳ್ಳುವುದಕ್ಕಿಂತ ಮುಂಚೆ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ಸರಿಯಲ್ಲ. ತಾವಾಗಲಿ, ಮುತ್ತಯ್ಯನವರಾಗಲಿ, ತಮ್ಮ ತಂದೆ ಕೆಂಪಯ್ಯನವರಾಗಲಿ, ಗಾಳಪ್ಪನವರಾಗಲಿ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಯಾವತ್ತೂ ಸಹ ಇರಲಿಲ್ಲ ಎಂದರೆ ಸರಿಯಲ್ಲ. ಚಲುವಯ್ಯನವರು ಮುತ್ತಯ್ಯನವರಿಂದ ಸಾಲ ಪಡೆದು ದಾವಾ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ನಿಪಿ 4 ರ ದಾಖಲಾತಿಯನ್ನು ಬರೆದುಕೊಟ್ಟಿದ್ದು ಸಾಲ ಮರು ಪಾವತಿ ಆದ ನಂತರ ಮುತ್ತಯ್ಯ ನವರು ಸದರಿ ದಾಖಲಾತಿಯನ್ನು ಹಿಂತಿರುಗಿಸಿರುತ್ತಾರೆ ಸದರಿ ದಾಖಲೆಯನ್ನು ದುರುಪಯೋಗಪಡಿಸಿಕೊಂಡು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸುಳ್ಳು ಹಕ್ಕು ಮಂಡಿಸುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**